ದಿನಾಂಕ: 21.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ</u>**

ನಾನು 9 ನೇ ತರತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯ ಹೆಸರು ರಮೇಶ. ಪ್ರತಿವಾದಿಯ ತಂದೆ ಹೆಸರು ಅಣ್ಣಯ್ಯ. ನಿಮ್ಮ ತಂದೆ ಹಾಗೂ ಪ್ರತಿವಾದಿಯ ತಂದೆಗೂ ಏನು ಸಂಬಂಧ ಎಂದರೆ ಸಾಕ್ಷಿ ಒಂದು ತಾಯಿಯ ಮಕ್ಕಳು ಎಂದು ಹೇಳುತ್ತಾರೆ. ನನ್ನ ತಂದೆ ಹಾಗೂ ಪ್ರತಿವಾದಿಯ ತಂದೆ ಮರಿಯಪ್ಪ ಎಂಬುವವರ

ಮಕ್ಕಳು. ಮರಿಯಪ್ಪನಿಗೆ ದಾವಾ ಆಸ್ತಿ ಒಂದೇ ಆಸ್ತಿ ಇದ್ದದ್ದು. ದಾವಾ ಆಸ್ತಿಯನ್ನು ಮರಿಯಪ್ಪ 30-35 ವರ್ಷಗಳ ಹಿಂದೆ ಕೊಂಡಿರುತ್ತಾರೆ. ಖರೀದಿ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಕ್ರಯ ಪತ್ರ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನನ್ನ ತಂದೆಗೆ 62 ವರ್ಷ ವಯಸ್ಸಾಗಿರುತ್ತದೆ. ನನ್ನ ತಂದೆ ಪ್ರತಿವಾದಿಯ ತಂದೆಗಿಂತ ಚಿಕ್ಕವರು. ಪ್ರತಿವಾದಿಗೆ 60 ವರ್ಷದ ಹಿಂದೆ ಮದುವೆಯಾಗಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವೆ ಹೂಡುವ ಕಾಲಕ್ಕೆ ಪ್ರತಿವಾದಿಗೆ 45 ವರ್ಷ ಎಂದು ವಾದ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸರಿ. ಅದೇ ರೀತಿ ಪ್ರತಿವಾದಿಗೆ 60 ವರ್ಷಗಳ ಹಿಂದೆ ಕಂಪಲಾಪುರದ ಕೃಷ್ಣ ಎಂಬುವವರೊಂದಿಗೆ ಮದುವೆಯಾಗಿದೆ ಎಂದು ವಾದ ಪತ್ರದಲ್ಲಿ ಬರೆಸಿರುತ್ತೀರಾ ಎಂದರೆ ಸರಿ. ವಾದ ಪತ್ರದಲ್ಲಿ ಪ್ರತಿವಾದಿ ಮದುವೆಯಾಗಿ ಗಂಡನ ಮನೆಗೆ ಹೋಗಿದ್ದರಿಂದ ಪ್ರತಿವಾದಿಯ ತಂದೆಯನ್ನು ನೀವೇ ಕರೆತಂದು ನೋಡಿಕೊಳ್ಳುತ್ತಿದ್ದೀರಿ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿ ಹೌದು, 2 ವರ್ಷ ಉಷಾರು ತಪ್ಪಿದ್ದರಿಂದ ಕರೆದುಕೊಂಡು ಬಂದು ನಾನೇ ನೋಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ಅಣ್ಣಯ್ಯನನ್ನು ನೋಡಿಕೊಂಡು ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿ ವಕೀಲರ ಬಳಿ ಕೊಟ್ಟಿದ್ದೇನೆ, ಮನೆಯಲ್ಲಿ ಸ್ವಲ್ಪ ಇದೆ ಎಂದು ಹೇಳುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ಅಣ್ಣಯ್ಯ ತೀರಿಕೊಳ್ಳುವ ಕಾಲಕ್ಕೆ ಎಷ್ಟು ವಯಸ್ಸಾಗಿತ್ತು ಎಂದರೆ ಸಾಕ್ಷಿ 60 ವರ್ಷ ಎಂದು ಹೇಳುತ್ತಾರೆ. ನೀವು ಯಾವ ಜನಾಂಗದವರು ಎಂದರೆ ಸಾಕ್ಷಿ ನಾವು ಕುರುಬಗೌಡರು ಎಂದು ಹೇಳುತ್ತಾರೆ. ಮೃತ ಅಣ್ಣಯ್ಯ ರವರ ತಂದೆ-ತಾಯಿ ಹೆಸರು ಮರೀಗೌಡ ಮತ್ತು ಸಣ್ಣಮ್ಮ ಎಂದು ಹೇಳಿರುತ್ತೀರಿ ಎಂದರೆ ಸರಿ. ಅಣ್ಣಯ್ಯ ಎಲ್ಲಿ ತೀರಿಕೊಂಡಿದ್ದಾರೆಂದರೆ ಸಾಕ್ಷಿ ದಿಃ30-06-2009 ರಂದು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಎಂದು ಹೇಳುತ್ತಾರೆ. ಅಣ್ಣೇಗೌಡರು ಯಾವ ಕಾರಣಕ್ಕಾಗಿ ಮೃತ ಹೊಂದಿರುತ್ತಾರೆಂದರೆ ಸಾಕ್ಷಿ ಲಿವರ್ ಖಾಯಿಲೆ ಇಂದ ತೀರಿಕೊಂಡರು ಎಂದು ಹೇಳುತ್ತಾರೆ.

ದಾವೆ ಹೂಡುವ ಕಾಲಕ್ಕೆ ನೀವು ಮರಣ ಶಾಸನ, ಕ್ರಯ ಪತ್ರ, ಡೆಪ್ಯೂಟಿ ತಹಶೀಲ್ದಾರ ರವರ ಆದೇಶದ ಪ್ರತಿ ಹಾಗೂ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೀರಿ ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ ಮರಣ ಪ್ರಮಾಣ ಪತ್ರ ನೆರಳಚ್ಚು ಪ್ರತಿಯಾಗಿದ್ದು, ಅದರ ಮೂಲ ಪ್ರತಿ ನಿಮ್ಮ ಮನೆಯಲ್ಲಿದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನೆರಳಚ್ಚು ಮರಣ ಪ್ರಮಾಣ ಪತ್ರದ ಪ್ರತಿಯ ಪ್ರಕಾರ ಅಣ್ಣಯ್ಯ ದಿಃ30-06-2009 ರಂದು ಕಂಪಲಾಪುರ ಗ್ರಾಮದಲ್ಲಿ ತೀರಿಕೊಂಡರು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಹಾಜರುಪಡಿಸಿದ ನೆರಳಚ್ಚು ಮರಣ ಪ್ರಮಾಣ ಪತ್ರದ ಪ್ರತಿಯಲ್ಲಿ ಬರೆದಿರುವ ವಿಷಯ ಸರಿಯಿಲ್ಲ ಎಂದರೆ ಸರಿ.

ಕೆ.ಆರ್.ಆಸ್ಪತ್ರೆಯಲ್ಲಿ ಮರಣ ಹೊಂದಿದ ಯಾವುದೇ ವ್ಯಕ್ತಿಯ ಮರಣದ ಬಗ್ಗೆ ಅವರೇ ನಮೂದಿಸಿ ಕಾರ್ಪೊರೇಶನ ಅಥವಾ ಮುನ್ಸಿಪಾಲಿಟಿಗೆ ತಿಳಿಸುತ್ತಾರೆಂದರೆ ಸರಿ. ಆಸ್ಪತ್ರೆಯವರು ತಿಳಿಸಿದ ನಂತರ ಕಾರ್ಪೊರೇಶನ ಅಥವಾ ಮುನ್ಸಿಪಾಲಿಟಿ ರವರು ತಮ್ಮ ಜನನ ಮತ್ತು ಮರಣ ವಹಿಯಲ್ಲಿ ನಮೂದಿಸಿಕೊಳ್ಳುತ್ತಾರೆಂದರೆ ಸರಿ.

ಅಣ್ಣಯ್ಯ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ತೀರಿಕೊಂಡರು ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಿಃ19-05-2009 ರಲ್ಲಿ ಅಣ್ಣಯ್ಯ ತೀರಿಕೊಂಡಿರುತ್ತಾರೆಂದರೆ ಸರಿಯಲ್ಲ. ಅಣ್ಣಯ್ಯ ತೀರಿಕೊಂಡ ಬಗ್ಗೆ ಸರಿಯಾದ ಮರಣ ಪ್ರಮಾಣ ಪತ್ರ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನೀವು ಅಥವಾ ನಿಮ್ಮ ಕಡೆಯವರು ಅಣ್ಣಯ್ಯನ ಮರಣ ಪ್ರಮಾಣ ಪತ್ರವನ್ನು ಪಡೆಯಲು ಮೈಸೂರಿನ ದಿವಾಣಿ ನ್ಯಾಯಾಲಯದಲ್ಲಿ ಸಿ.ಮಿಸ್.640/2013 ರಂತೆ ಪ್ರಕರಣ ದಾಖಲಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. 21-11-2013 ರಂದು ನ್ಯಾಯಾಲಯ ಮೈಸೂರಿನ ಸಿಟಿ ಕಾರ್ಪೊರೇಶನಗೆ ಅಣ್ಣಯ್ಯ ಮರಣದ ದಿನಾಂಕವನ್ನು ನಮೂದಿಸುವಂತೆ ಆದೇಶ ಮಾಡಿರುತ್ತದೆಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಅಣ್ಣಯ್ಯ ಮನೆ ನಂ..11/77, 2 ನೇ ಕ್ರಾಸ್, ಪಟ್ಟೆಗಾರ್ ಬೀದಿ, ಮಂಡಿಮೊಹಲ್ಲಾ, ಮೈಸೂರಿನಲ್ಲಿ ತೀರಿಕೊಂಡರು ಎಂದು

ವಿಳಾಸವನ್ನು ನಮೂದಿಸಿ ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ದಿಃ17-12-2013 ರಂದು ಮೈಸೂರಿನ ಕಾರ್ಪೊರೇಶನ ನಲ್ಲಿ ಅಣ್ಣಯ್ಯನ ಮರಣ ದಿನಾಂಕವನ್ನು ನೊಂದಾಯಿಸಲಾಯಿತು ಎಂದರೆ ಸರಿಯಲ್ಲ.

ಅಣ್ಣಯ್ಯನಿಗೆ ಪ್ರತಿವಾದಿ ಒಬ್ಬಳೇ ಮಗಳು ಎಂದರೆ ಸರಿ. ಪ್ರತಿವಾದಿಗೆ ಒಬ್ಬ ಗಂಡು ಮಗ, ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಅಣ್ಣಯ್ಯನ 2 ನೇ ಹೆಂಡತಿ ಎಂದು ಹೇಳಲಾದ ವ್ಯಕ್ತಿಯನ್ನು ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಸೇರಿಸಿದ್ದೇನೆಂದು ಹೇಳುತ್ತಾರೆ. ದಾವೆಯನ್ನು ಪ್ರತಿವಾದಿಯ ವಿರುದ್ಧ ಮಾತ್ರ ಹೂಡಲಾಗಿದೆ ಎಂದರೆ ಸರಿ. ಅಣ್ಣಯ್ಯ ಮರಣ ಹೊಂದುವ ಮುಂಚಿತವಾಗಿಯೇ ಪ್ರತಿವಾದಿಗೆ 3 ಜನ ಮಕ್ಕಳು ಜನಿಸಿದ್ದರು ಎಂದರೆ ಸರಿ. ಅಣ್ಣಯ್ಯನಿಗೆ ಅವರ ಒಬ್ಬಳೇ ಮಗಳಾದ ಪ್ರತಿವಾದಿಯ ಮೇಲೆ ಹಾಗೂ ಪ್ರತಿವಾದಿಯ 3 ಜನ ಮಕ್ಕಳ ಮೇಲೆ ಅತೀವವಾದ ಪ್ರೀತಿ, ವಿಶ್ವಾಸ ಇತ್ತು ಎಂದರೆ ಸರಿಯಲ್ಲ. ಅಣ್ಣಯ್ಯನಿಗೆ ಅವರ ಒಬ್ಬಳ ಮಗಳು ಹಾಗೂ ಮೊಮ್ಮಕ್ಕಳ ಮೇಲೆ ದ್ವೇಷ ಇತ್ತಾ ಎಂದರೆ ಸಾಕ್ಷಿ ದ್ವೇಷ ಇರಲಿಲ್ಲ ಎಂದು ಹೇಳುತ್ತಾರೆ. ಅಣ್ಣಯ್ಯ ಜೀವಂತವಾಗಿ ಇರುವವರೆಗೂ ಮಗಳ ಮನೆಗೆ ಹೋಗಿ-ಬಂದು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಣ್ಣಯ್ಯನನ್ನು ತನ್ನ 2 ನೇ ಹೆಂಡತಿ ನೋಡಿಕೊಳ್ಳುತ್ತಿರಲಿಲ್ಲವಾ ಎಂದರೆ ಸಾಕ್ಷಿ 2 ನೇ ಹೆಂಡತಿ ಹಾಗೂ ಅಣ್ಣಯ್ಯ ಇಬ್ಬರೂನಮ್ಮ ಮನೆಯಲ್ಲೇ ಇದ್ದರು ಎಂದು ಹೇಳುತ್ತಾರೆ. ಅಣ್ಣಯ್ಯ ಹಾಗೂ 2 ನೇ ಹೆಂಡತಿ ನಿಮ್ಮ ಮನೆಯಲ್ಲೇ ವಾಸ ಇದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಪಡೆಸಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಗೆ ನ್ಯಾಯಾಲಯಕ್ಕೆ ತಾನು ಹಾಜರುಪಡಿಸಿದ ದಾಖಲಾತಿಗಳನ್ನು ಕೊಟ್ಟು, ಸದರಿ ದಾಖಲಾತಿಯನ್ನು ತೋರಿಸುವಂತೆ ಕೇಳಿದ್ದು, ಸಾಕ್ಷಿ ಸದರಿ ದಾಖಲಾತಿಗಳಲ್ಲಿ ಅದು ಇಲ್ಲ ಎಂದು ಹೇಳುತ್ತಾರೆ.

ಎಷ್ಟು ವರ್ಷ ಅಣ್ಣಯ್ಯ ಹಾಗೂ 2 ನೇ ಹೆಂಡತಿ ನಿಮ್ಮ ಮನೆಯಲ್ಲಿ ಇದ್ದರು ಎಂದರೆ ಸಾಕ್ಷಿ ಸುಮಾರು 10 ವರ್ಷ ಗಳ ಕಾಲ ಇದ್ದರು ಎಂದು ಹೇಳುತ್ತಾರೆ. 10 ವರ್ಷಗಳ ಕಾಲ ಅಣ್ಣಯ್ಯ ಹಾಗೂ 2 ನೇ ಹೆಂಡತಿ ಮತ ಚಲಾವಣೆ ಮಾಡುತ್ತಿದ್ದರೋ, ಇಲ್ಲವೋ

ಎಂದರೆ ಸಾಕ್ಷಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಅಣ್ಣಯ್ಯ ಹಾಗೂ 2 ನೇ ಹೆಂಡತಿಗೆ ಪಡಿತರ ಚೀಟಿ ಇತ್ತೋ, ಇಲ್ಲವೋ ಎಂದರೆ ಸಾಕ್ಷಿ ಇತ್ತು ಎಂದು ಹೇಳುತ್ತಾರೆ. ಅಣ್ಣಯ್ಯ ಹಾಗೂ 2 ನೇ ಹೆಂಡತಿ ಇಬ್ಬರೂ 10 ವರ್ಷಗಳ ಕಾಲ ಒಟ್ಟಿಗೆ ನಿಮ್ಮ ಮನೆಯಲ್ಲಿ ವಾಸ ಇದ್ದರು ಎಂದು ತೋರಿಸಲು ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ.

ಅಣ್ಣಯ್ಯ ಹುಟ್ಟಿದಾಗಿನಿಂದಲೂ ಅವರದ್ದೇ ಪ್ರತ್ಯೇಕ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. ಸದರಿ ಮನೆ ಪ್ರತಿವಾದಿ ಸ್ವಾ ಧೀನದಲ್ಲಿದೆ ಎಂದರೆ ಸಾಕ್ಷಿ ನಮ್ಮ ಸ್ವಾ ಧೀನದಲ್ಲಿದೆ ಎಂದು ಹೇಳುತ್ತಾರೆ. ಅಣ್ಣಯ್ಯನ ಮನೆ ನಿಮ್ಮ ಸ್ವಾ ಧೀನದಲ್ಲಿ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. 2 ವರ್ಷಗಳ ಕಾಲ ಅಣ್ಣಯ್ಯನಿಗೆ ವೈದ್ಯೋಪಚಾರ ಮಾಡಿಸಿದ ಬಗ್ಗೆ, ಔಷಧಿ ಕೊಡಿಸಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರುಪಡಿಸಿಸಿಲ್ಲ ಎಂದರೆ ಸರಿ.

ನೀವು ಡೆಪ್ಯೂಟಿ ತಹಸೀಲ್ದಾರರವರಿಗೆ ದಾವಾ ಆಸ್ತಿಯ ಖಾತೆ ಮರಣ ಶಾಸನದಂತೆ ಬದಲಾವಣೆ ಮಾಡಿ ಕೊಡುವಂತೆ ಅರ್ಜಿ ಕೊಟ್ಟಿದ್ದೀರಿ ಎಂದರೆ ಸರಿ. ಸದರಿ ಅರ್ಜಿಗೆ ಪ್ರತಿವಾದಿ ತಾನು ಅಣ್ಣಯ್ಯನ ಮಗಳಾಗಿದ್ದು, ಖಾತೆ ಬದಲಾವಣೆ ಮಾಡದಂತೆ ತಕರಾರು ಸಲ್ಲಿಸಿದಳು ಎಂದರೆ ಸರಿ. ಸದರಿ ತಕರಾರನ್ನು ಪರಿಗಣಿಸಿ ಡೆಪ್ಯೂಟಿ ತಹಸೀಲ್ದಾರರವರು ಖಾತೆ ಮಾಡುವಂತೆ ನೀಡಿದ ಅರ್ಜಿಯನ್ನು ವಜಾ ಮಾಡಿದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿವಾಣಿ ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳುವಂತೆ ಆದೇಶ ಮಾಡಿರುತ್ತಾರೆಂದು ಹೇಳುತ್ತಾರೆ. ಡೆಪ್ಯೂಟಿ ತಹಸೀಲ್ದಾರರವರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ.

ಅಣ್ಣಯ್ಯ ಮಾಡಿಕೊಟ್ಟ ಮರಣ ಶಾಸನದಂತೆ ಯಾವುದಾದರು ನ್ಯಾಯಾಲಯದಲ್ಲಿ ಪ್ರೋಬೇಟ್ ನೀಡುವಂತೆ ಕೋರಿ ಈ ದಾವೆ ಹೊರತುಪಡಿಸಿ ಬೇರೆ ದಾವೆ ಹೂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

O.S .No.247/2014
PW-1

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.